# ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,

# ನಂಜನಗೂಡು

**ಓ ಎಸ್ ನಂ.236-2019** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆಯ/ ಗಂಡನ ಹೆಸರು<br>ವಯಸ್ಸು<br>ಉದ್ಯೋಗ<br>ವಾಸ್ತವ್ಯ | ಎಂ.ಡಿ.ಜಯಶ್ರೀ<br>ಲೇಟ್ ಎ ಮಹದೇವನಾಯ್ಕ<br>54 ವರ್ಷ<br>ಗೃಹಿಣಿ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ 13-01-2022.** |

**ಮುಖ್ಯ ವಿಚಾರಣೆಃ   ವಾದಿ ಪರ ವಕೀಲರಾದ ಶ್ರೀ ಸಿ.ಎಲ್.ಬಿ.  ರವರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ  ಎಲ್ಲಾ ವಿಷಯಗಳು ಸತ್ಯವಾಗಿದ್ದು ಅದನ್ನು ನಾನೇ ಹೇಳಿ ಬರೆಯಿಸಿ ಸಹಿ ಮಾಡಿರುತ್ತೇನೆ.

ದಾವಾ ಸ್ವತ್ತಿನ ಪೂರ್ವಕ್ಕೆ ಇರುವ ಪ್ರತಿವಾದಿಯ ಸ್ವತ್ತಿಗೆ ಸಂಬಂಧಪಟ್ಟಂತೆ ದಿ.06-12-2017 ರ ಕ್ರಯ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-1 ಎಂದು, ದಿ.07-02-2019 ರಂದು ನಾನು ಗ್ರಾಮ ಪಂಚಾಯ್ತಿ ಅಧ್ಯಕ್ಷರು ನಗರ್ಲೆ ಗ್ರಾಮ ಪಂಚಾಯ್ತಿ ಇವರಿಗೆ ನೀಡಿದ ಮನವಿ ಪತ್ರದ ನಕಲನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-2 ಎಂದು, 2 ಛಾಯಾ ಚಿತ್ರಗಳು ಹಾಗೂ ಒಂದು ಸಿಡಿ. ಯನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ-3 ರಿಂದ 5 ಎಂದು, ದಿ.14-10-1994 ರಲ್ಲಿ ನನ್ನ ಯಜಮಾನರು ಹಾಗೂ ಅವರ ಅಣ್ಣನ ನಡುವೆ ನೋಂದಣಿ ಆಗದ ವಿಭಾಗ ಪತ್ರ ಆಗಿದ್ದು ಅದರ ಮೂಲ ಪ್ರತಿ ನನ್ನ ಭಾವನವರಾದ ಈರನಾಯ್ಕ ರವರ ಬಳಿ ಇದ್ದು ನನ್ನ ಬಳಿ ಅದರ ಜೆರಾಕ್ಸ್ ಪ್ರತಿ ಇರುತ್ತದೆ.

(ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶವನ್ನು ಕೇಳಿರುವುದರಿಂದ ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**2 ನೇ ಪ್ರ.ದ. ನ್ಯಾ ದಂ. ನಂಜನಗೂಡು**